ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ.)

Institutions sponsored by

VIVEKANDA VIDYAVARDHKA SANGHA, PUTTUR

Tel: 08251 236599 Puttur - 574 203 (D.K.)

ವಿವೇಕಾನಂದ ಮಹಾವಿದ್ಯಾಲಯ

ಪುತ್ತೂರು, ದ.ಕ. – 574 203

ನ್ಯಾಕ್‌ನಿಂದ 3.30 ಅಂಕಗಳೊಂದಿಗೆ 'ಎ' ಗ್ರೇಡ್ ಮರುಮಾನ್ಯತೆ ಪಡೆದ ಸಂಸ್ಥೆ
ಯು.ಜಿ.ಸಿ.ಯಿಂದ Potential Excellence (CPE) ಮಾನ್ಯತೆ ಪಡೆದ ಸಂಸ್ಥೆ.
ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ.) ಇದರಿಂದ ಸ್ಥಾಪಿತ ಶಿಕ್ಷಣ ಸಂಸ್ಥೆ

VIVEKANANDA COLLEGE

Puttur, D.K. - 574 203

Affiliated to Mangalore University &
Re-accordiated at 'A' Grade by the NAAC with 3.30 CGPA
Recognised as College with Potential for Excellence (CPE) by the UGC

CALENDER 2021–22

STUDENT'S PERSONAL DETAILS
(2021-22)

Name of the Student :

Date of Birth :

Class : Subject Combination :

Rool Number :

Name of Parents : Father :

Mother :

Telephone Number :

Address of Student : Address of Parent :

.....

.....

.....

.....

Pincode : ☐☐☐☐☐☐ Pincode : ☐☐☐☐☐☐

Identification Marks : 1.

2.

Blood Group :

Signature of the Student :

Signature of the Father :

Signature of the Mother :

Signature of the Local Guardian :

Name of the Academic Advisor :

Name of the Mentor :

Signature or seal of the Principal :

ಸೇಲಿಫಾಸ್ಟ್ 2021-22

ಹೆಸರು ಮತ್ತು ವಿಳಾಸ .....

ತರಗತಿ ಮತ್ತು ವಿಭಾಗ ..... ಕೊಠಡಿ ಸಂಖ್ಯೆ ..... ಹಾಜರಿ ಕೈಪಿ ಸಂಖ್ಯೆ .....

ವಾರ	ಪೂರ್ವಾರ್ಧ (9.00ರಿಂದ 1.00ವರೆಗೆ)				ಉತ್ತರಾರ್ಧ (2.00ರಿಂದ 5.00ವರೆಗೆ)		
	I	II	III	IV	V	VI	VII
ಸೋಮವಾರ							
ಮಂಗಳವಾರ							
ಬುಧವಾರ							
ಗುರುವಾರ							
ಶುಕ್ರವಾರ							
ಶನಿವಾರ							

ವಿವೇಕಾನಂದ ಮಹಾವಿದ್ಯಾಲಯ

'ನ್ಯಾಕ್'ನಿಂದ 3.30 ಅಂಕಗಳೊಂದಿಗೆ "ಎ" ಗ್ರೇಡ್ ಮರುಮಾನ್ಯತೆ ಪಡೆದ ಸಂಸ್ಥೆ
ಯುಜಿಸಿಯಿಂದ 'ಕಾಲೇಜ್ ವಿತ್ ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್' ಮಾನ್ಯತೆ ಪಡೆದ ಸಂಸ್ಥೆ

ನೆಹರು ನಗರ, ಪುತ್ತೂರು–574 203 ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ

ಸ್ಥಾಪನೆ : 1965

VIVEKANANDA COLLEGE

Re-Accredited at 'A' lelvel by the 'NAAC' with 3.30CGPA
Recognised as the 'College with Potential for Excellence'(CPE) by the UGC

PUTTUR D.K. – 574 203
ESTD:1965

ಕ್ಯಾಲೆಂಡರ್
CALENDAR 2021-22

ದೂರವಾಣಿ

ಕಾರ್ಯಾಲಯ: 08251–230455, ಪ್ರಾಚಾರ್ಯರ ಕಛೇರಿ: 08251–233635
ವಿದ್ಯಾರ್ಥಿನಿ ನಿಲಯ : 08251–231399,238294
ವಿದ್ಯಾರ್ಥಿ ನಿಲಯ : 08251–230294,232184
ವಿ.ವಿ.ಸಂಘ ಕಛೇರಿ: 08251–236599
E-mail : principalvcputtur@gmail.com
Website : vcputtur.ac.in

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ.)

ಪುತ್ತೂರು, ದಕ್ಷಿಣ ಕನ್ನಡ

(ನಮ್ಮ ಮಾತೃಸಂಸ್ಥೆ)

ವಂದೇ ಮಾತರಂ

ವಂದೇ ಮಾತರಂ
ಸುಜಲಾಂ ಸುಫಲಾಂ ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ

ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಫುಲ್ಲ ಕುಸುಮಿತ ಧ್ರುಮದಳ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಾಂ

ಕೋಟಿ ಕೋಟಿ ಕಂಠ ಕಲಕಲ ನಿನಾದ ಕರಾಲೆ
ಕೋಟಿ ಕೋಟಿ ಭುಜೈಧೃತಖರ ಕರವಾಲೆ
ಅಬಲಾ ಕೇನೋ ಮಾ ಏತೋ ಬಲೆ
ಬಹುಬಲಧಾರಿಣೀಂ ನಮಾಮಿ ತಾರಿಣೀಂ
ರಿಪುದಲ ವಾರಿಣೀಂ ಮಾತರಂ

ತುಮಿ ವಿದ್ಯಾ ತುಮಿ ಧರ್ಮ ತುಮಿ ಹೃದಿ ತುಮಿ ಮರ್ಮ
ತ್ವಂ ಹಿ ಪ್ರಾಣಾಃ ಶರೀರೇ
ಬಾಹುತೇ ತುಮಿ ಮಾ ಶಕ್ತಿ ಹೃದಯೇ ತುಮಿ ಮಾ ಭಕ್ತಿ
ತೋಮಾರ ಈ ಪ್ರತಿಮಾ ಗಡಿ ಮಂದಿರೇ ಮಂದಿರೇ

ತ್ವಂ ಹಿ ದುರ್ಗಾ ದಶಪ್ರಹರಣ ಧಾರಣೀ
ಕಮಲಾ ಕಮಲದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀಂ
ನಮಾಮಿ ತ್ವಾಂ ನಮಾಮಿ ಕಮಲಾಂ
ಅಮಲಾಂ ಅತುಲಾಂ ಸುಜಲಾಂ ಸುಫಲಾಂ ಮಾತರಂ
ಶ್ಯಾಮಲಾಂ ಸರಲಾಂ ಸುಷ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ

– ಬಂಕಿಮಚಂದ್ರ ಚಟ್ಟೋಪಾಧ್ಯಾಯ

ಆಡಳಿತ ಸಮಿತಿ 2021–22

ಡಾ ಶ್ರೀಪತಿ ಕಲ್ಲೂರಾಯ ಕುಂಜೂರು ದೇವಸ್ಥಾನದ ಹತ್ತಿರ, ಅರ್ಯಾಪು ಅಂಚೆ ಮತ್ತು ಗ್ರಾಮ ಪುತ್ತೂರು ತಾಲೂಕು, ದ.ಕ.–574 210	ಅಧ್ಯಕ್ಷರು
ಶ್ರೀ ಮುರಳೀಕೃಷ್ಣ ಕೆ.ಎನ್. ವಕೀಲರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹತ್ತಿರ, ಪಂಚವಟಿ ರಸ್ತೆ, ಪುತ್ತೂರು, ದ.ಕ.–574 201	ಕಾರ್ಯದರ್ಶಿ/ಸಂಚಾಲಕ
ಶ್ರೀ ಎಂ. ಶ್ರೀನಿವಾಸ ಸಾಮಂತ್ ನಂ. 370/1, ಶಿವಗಿರಿ ನಗರ, ಕೋಟೆಚ ಹಾಲ್ ಹತ್ತಿರ, ಎ.ಪಿ.ಎಂ.ಸಿ. ರಸ್ತೆ, ಸಾಲ್ಮರ, ಪುತ್ತೂರು, ದ.ಕ.–574 201	ಕೋಶಾಧಿಕಾರಿ
ಪ್ರೊ. ವಿಷ್ಣುಗಣಪತಿ ಭಟ್ ವಿವೇಕಾನಂದ ಕಾಲೇಜು, ಪುತ್ತೂರು	ಪ್ರಾಂಶುಪಾಲರು ಮತ್ತು ಪದನಿಮಿತ್ತ ಕಾರ್ಯದರ್ಶಿ
ಶ್ರೀ ಯಂ. ಅನಂತಕೃಷ್ಣ ನಾಯಕ್ S/o ಯಂ. ಅಚ್ಯುತ್ ನಾಯಕ್, ಅಚ್ಯುತ್ ನಿವಾಸ, ಮೇಲ್ವಾದೆ ಮನೆ ಅಂಚೆ ಕಾವು, ಮಾಡ್ನೂರು ಗ್ರಾಮ, ಪುತ್ತೂರು ತಾಲೂಕು ದ.ಕ.–574 223	ಸದಸ್ಯ
ಶ್ರೀ ಎರ್ಮುಂಜ ಶಂಕರ ಜೈಸ ಕೆದಿಮಾರು, ಪಡ್ನೂರು ಗ್ರಾಮ ಮತ್ತು ಅಂಚೆ ಪುತ್ತೂರು, ದ.ಕ.–574 220	ಸದಸ್ಯ
ಶ್ರೀ ಜಗನ್ನಾಥ ಎ ಮುರ, ನೆಹರು ನಗರ, ಪುತ್ತೂರು, ದ.ಕ.	ಸದಸ್ಯ
ಶ್ರೀಮತಿ ಶೋಭಾ ಕೊಳತ್ತಯ ಎನ್. W/o ಶ್ರೀಕಾಂತ್ ಕೊಳತ್ತಾಯ, ಕರ್ಮಲ, ಪುತ್ತೂರು, ದ.ಕ.	ಸದಸ್ಯ
ಶ್ರೀಮತಿ ಶುಭಾ ಅಡಿಗ W/o ಡಾ ಜೆ.ಸಿ. ಅಡಿಗ, "ಚೈತನ್ಯ", ಬೊಳುವಾರು, ಪುತ್ತೂರು, ದ.ಕ.	ಸದಸ್ಯ
ಶ್ರೀ ಸುಕುಮಾರ ರಾವ್ ಎನ್.ಎಸ್ ಸ್ಯಾರ ಮನೆ, ಕೊಡಿಪ್ಪಾಡಿ ಅಂಚೆ ಮತ್ತು ಗ್ರಾಮ ಪುತ್ತೂರು, ದ.ಕ.	ಸದಸ್ಯ
ಡಾ ಶ್ರೀಧರ ನಾಯ್ಕ್ ಬಿ. ಮುಖ್ಯಸ್ಥರು, ಇತಿಹಾಸ ವಿಭಾಗ	ಶಿಕ್ಷಕರ ಪ್ರತಿನಿಧಿ

ಶ್ರೀ ಶಿವಪ್ರಸಾದ್ ಇ
ನಿರ್ದೇಶಕರು
ವಿವೇಕಾನಂದ ವಿದ್ಯಾವರ್ಧಕ ಸಂಘ,
ಪುತ್ತೂರು (ರಿ)

ವಿವೇಕಾನಂದ ವಿದ್ಯಾವರ್ಧಕ ಸಂಘ,
ಇದರ ಪ್ರತಿನಿಧಿ

ವಿಶೇಷ ಆಹ್ವಾನಿತರು

ಡಾ ಕೆ ಪ್ರಭಾಕರ್ ಭಟ್
ಬಂಟ್ವಾಳ ತಾಲೂಕು, ದ.ಕ.
ಕಲ್ಲಡ್ಕ–574 222

ಅಧ್ಯಕ್ಷರು
ವಿವೇಕಾನಂದ ವಿದ್ಯಾವರ್ಧಕ ಸಂಘ,
ಪುತ್ತೂರು (ರಿ)

ಡಾ ಕೆ ಯಂ ಕೃಷ್ಣ ಭಟ್
"ಸುಧಾಮ"
ಇಡ್ಕಿದು ಗ್ರಾಮ ಮತ್ತು ಅಂಚೆ
ಬಂಟ್ವಾಳ ತಾಲೂಕು, ದ.ಕ.

ಕಾರ್ಯದರ್ಶಿ
ವಿವೇಕಾನಂದ ವಿದ್ಯಾವರ್ಧಕ ಸಂಘ,
ಪುತ್ತೂರು (ರಿ)

Vision Statement

"A graduate of Vivekananda college will be civilised, principle - centred, endowed with a strong self -esteem, and concern for fellow beings and the environment, besides being confident, competent and employable."

Mission Statement

"Vivekananda College will strive to provide models of value practices, offer opportunities for learning and development, create infrastructure for interventions including those for preservation of environment and organise competence enhancement programmes, through able management and committed members of the staff, with the assistance of other stake holders."

ಪ್ರಾಧ್ಯಾಪಕ ವೃಂದ 2021-22

ಹೆಸರು	ವಿಭಾಗ	ದೂರವಾಣಿ
ಪ್ರೊ. ವಿಷ್ಣು ಗಣಪತಿ ಭಟ್, ಎಂ.ಎಸ್ಸಿ., ಎಂ.ಫಿಲ್.	ಪ್ರಾಂಶುಪಾಲರು	08251–233635 (ಕಾರ್ಯಾಲಯ)
----------: ಇಂಗ್ಲಿಷ್ ವಿಭಾಗ:----------		
ಶ್ರೀ ಹೆಚ್ ಬಾಲಕೃಷ್ಣ, ಎಂ.ಎ., ಎಂ.ಫಿಲ್.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು	
ಶ್ರೀಮತಿ ಸರಸ್ವತಿ ಸಿ ಕೆ ಎಂ.ಎ.	ಉಪನ್ಯಾಸಕರು	
ಶ್ರೀಮತಿ ಅಂಬಿಕಾ ಎನ್ ಆರ್ ಎಂ.ಎ., ಬಿ.ಎಡ್.	ಉಪನ್ಯಾಸಕರು	
ಶ್ರೀಮತಿ ರೇಖಾ ನಾಯರ್ ಎಂ.ಎ.	ಉಪನ್ಯಾಸಕರು	
ಕು. ಸೌಂದರ್ಯ ಬಿ. ಎಂ.ಎ.	ಉಪನ್ಯಾಸಕರು	
ಕು. ರಚನ ಎಂ.ಆರ್. ಎಂ.ಎ.	ಉಪನ್ಯಾಸಕರು	
----------: ಕನ್ನಡ ವಿಭಾಗ:----------		
ಡಾ. ಶ್ರೀಧರ ಹೆಚ್ ಜೆ ಎಂ.ಎ., ಪಿ.ಹೆಚ್.ಡಿ.	ಸಹ ಪ್ರಾಧ್ಯಾಪಕರು ವಿಭಾಗ ಮುಖ್ಯಸ್ಥರು	
ಡಾ. ಮನಮೋಹನ ಎಂ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು	
ಡಾ ಗೀತಾ ಕುಮಾರಿ ಟಿ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು	
ಶ್ರೀಮತಿ ಮೈತ್ರಿ ಭಟ್ ಎಂ.ಎ.	ಉಪನ್ಯಾಸಕರು	
ಶ್ರೀಮತಿ ರೇಖಾ ಪಿ ಎಂ ಎಂ.ಎ.	ಉಪನ್ಯಾಸಕರು	
----------: ಹಿಂದಿ ವಿಭಾಗ:----------		
ಡಾ. ಸಿ ದುರ್ಗಾರತ್ನ ಎಂ.ಎ, ಎಂ.ಫಿಲ್., ಪಿ.ಹೆಚ್.ಡಿ. ಹಿಂದಿ ಪ್ರವೀಣ	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು	
ಕು. ಪೂಜಾ ವೈ ಡಿ ಎಂ.ಎ	ಉಪನ್ಯಾಸಕರು	
----------: ಸಂಸ್ಕೃತ ವಿಭಾಗ:----------		
ಡಾ. ಎಂ ಉಮಾದೇವಿ ಎಂ.ಎ., ಪಿ.ಹೆಚ್.ಡಿ.	ಸಹ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು	
ಡಾ. ಶ್ರೀಶ ಕುಮಾರ ಎಂ ಕೆ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು	
----------: ಪತ್ರಿಕೋದ್ಯಮ ವಿಭಾಗ:----------		
ಶ್ರೀಮತಿ ಭವ್ಯಾ ಪಿ ಆರ್ ಎಂ.ಸಿ.ಜೆ.	ಉಪನ್ಯಾಸಕರು ಮತ್ತು ವಿಭಾಗದ ಮುಖ್ಯಸ್ಥರು	
ಕು. ಸೀಮಾ ಪಿ ಜೆ ಎಂ.ಸಿ.ಜೆ.	ಉಪನ್ಯಾಸಕರು	

----------: ಭೌತಶಾಸ್ತ್ರ ವಿಭಾಗ :----------

ಶ್ರೀ ಎನ್ ನರಸಿಂಹ ಭಟ್ ಎಂ.ಎಸ್ಸಿ.	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು
ಶ್ರೀ ಶಿವಪ್ರಸಾದ ಕೆ ಎಸ್ ಎಂ.ಎಸ್ಸಿ.	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಕಾರ್ಯಕ್ರಮ ಸಂಯೋಜಕರು
ಶ್ರೀಮತಿ ಲಾವಣ್ಯ ಸಿ ಕೆ ಎಂ.ಎಸ್ಸಿ.	ಉಪನ್ಯಾಸಕರು
ಶ್ರೀ ದೀಕ್ಷಿತ್ ಕೆ ಜೆ ಎಂ.ಎಸ್ಸಿ.	ಉಪನ್ಯಾಸಕರು
ಕು ವರ್ಷಾ ಮೊಳೆಯಾರ್ ಎಂ.ಎಸ್ಸಿ.	ಉಪನ್ಯಾಸಕರು
ಡಾ. ಶ್ರೀಶ ಭಟ್ ಎಂ.ಎಸ್ಸಿ.	ಉಪನ್ಯಾಸಕರು

---------ಇಲೆಕ್ಟ್ರಾನಿಕ್ಸ್ ವಿಭಾಗ:----------

ಶ್ರೀಮತಿ ಸುಪ್ರಭಾ ಎ ಎಂ.ಎಸ್ಸಿ.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು
ಕು ಸ್ವರ್ಣಲಕ್ಷ್ಮೀ ಎಂ.ಟೆಕ್.	ಉಪನ್ಯಾಸಕರು (ಅಂಶಕಾಲಿಕ)

---------ರಸಾಯನಶಾಸ್ತ್ರ ವಿಭಾಗ:----------

ಶ್ರೀ ಕೃಷ್ಣ ಕಾರಂತ ಕೆ ಎಂ.ಎಸ್ಸಿ., ಎಂ.ಫಿಲ್.	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು
ಶ್ರೀಮತಿ ನಿಶಾ ಎನ್ ಎಂ.ಎಸ್ಸಿ.	ಉಪನ್ಯಾಸಕರು
ಕು ಮಾಲತಿ ಎಸ್ ಎಂ.ಎಸ್ಸಿ.	ಉಪನ್ಯಾಸಕರು
ಶ್ರೀಮತಿ ಅನ್ನಪೂರ್ಣಿಕಾ ಪ್ರಭು ಎಂ.ಎಸ್ಸಿ.	ಉಪನ್ಯಾಸಕರು
ಶ್ರೀಮತಿ ರಚನಾ ಕೆ ಎಂ.ಎಸ್ಸಿ.	ಉಪನ್ಯಾಸಕರು
ಕು ರಶ್ಮಿತಾ ಎಂ ಎಂ.ಎಸ್ಸಿ.	ಉಪನ್ಯಾಸಕರು

---------ಗಣಿತ ವಿಭಾಗ:----------

ಶ್ರೀಮತಿ ಸೌಮ್ಯ ಬಿ ಎಂ.ಎಸ್ಸಿ., ಬಿ.ಎಡ್.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು
ಶ್ರೀಮತಿ ಜ್ಯೋತಿ ವಿ ಎಂ.ಎಸ್ಸಿ.	ಉಪನ್ಯಾಸಕರು
ಶ್ರೀ ಪ್ರಭಾಕರ ಎಸ್ ಎಂ.ಎಸ್ಸಿ.	ಉಪನ್ಯಾಸಕರು

--------- ಸಂಖ್ಯಾಶಾಸ್ತ್ರ ವಿಭಾಗ:----------

ಪ್ರೊ. ವಿಷ್ಣು ಗಣಪತಿ ಭಟ್, ಎಂ.ಎಸ್ಸಿ., ಎಂ.ಫಿಲ್.	ಸಹ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು

---------ಗಣಕ ವಿಜ್ಞಾನ ವಿಭಾಗ:----------

ಶ್ರೀ ಪಿ ಪ್ರಕಾಶ್ ಕುಮಾರ್, ಎಂ.ಎಸ್ಸಿ., ಎಂ.ಟೆಕ್.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು
ಕು ಜೀವಿತಾ ಎನ್ ಕೆ ಎಂ.ಸಿ.ಎ.	ಉಪನ್ಯಾಸಕರು
ಶ್ರೀಮತಿ ಶ್ವೇತಲಕ್ಷ್ಮೀ ಕೆ ಎಂ.ಸಿ.ಎ.	ಉಪನ್ಯಾಸಕರು
ಶ್ರೀ ಗುರುಕಿರಣ್ ಭಟ್ ಎಂ.ಸಿ.ಎ.	ಉಪನ್ಯಾಸಕರು
ಶ್ರೀ ಸೂರ್ಯನಾರಾಯಣ ಪಿಎಸ್ ಎಂ.ಸಿ.ಎ.	ಉಪನ್ಯಾಸಕರು
ಶ್ರೀಮತಿ ಸುಚಿತ್ರಾ ಎಂ.ಸಿ.ಎ.	ಉಪನ್ಯಾಸಕರು
ಕು. ಬಾನುಪ್ರಿಯ ಎಂ.ಬಿ., ಎಂ.ಎಸ್ಸಿ.	ಉಪನ್ಯಾಸಕರು
ಶ್ರೀಮತಿ ನಮೀಷಾ ಎಸ್ ರಾವ್ ಎಂ.ಎಸ್ಸಿ.	ಉಪನ್ಯಾಸಕರು
ಕು. ಶಿವಾನಿ ಎಂ ಎಂ.ಎಸ್ಸಿ.	ಉಪನ್ಯಾಸಕರು

---------ಸಸ್ಯಶಾಸ್ತ್ರ ವಿಭಾಗ:----------

ಶ್ರೀ ಶ್ರೀಕೃಷ್ಣಗಣರಾಜ ಭಟ್ ಎಸ್ ಎಂ.ಎಸ್ಸಿ., ಎಂ.ಫಿಲ್.	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು
ಡಾ ಸ್ಮಿತಾ ಪಿ.ಜಿ ಎಂ.ಎಸ್ಸಿ., ಪಿ.ಹೆಚ್.ಡಿ.	ಉಪನ್ಯಾಸಕರು
ಡಾ ಸೌಮಿತ್ರ ಕೆ ಎಂ.ಎಸ್ಸಿ., ಪಿ.ಹೆಚ್.ಡಿ.	ಉಪನ್ಯಾಸಕರು

---------ಪ್ರಾಣಿಶಾಸ್ತ್ರ ವಿಭಾಗ:----------

ಡಾ ಕೆ ಎಸ್ ಈಶ್ವರ ಪ್ರಸಾದ್ ಎಂ.ಎಸ್ಸಿ., ಎಂ.ಫಿಲ್.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು
ಶ್ರೀ ಸುಹಾಸ್‌ಕೃಷ್ಣ ಎ ಜಿ ಎಂ.ಎಸ್ಸಿ.	ಉಪನ್ಯಾಸಕರು
ಶ್ರೀಮತಿ ದಿವ್ಯಶ್ರೀ ಜಿ ಎಂ.ಎಸ್ಸಿ.	ಉಪನ್ಯಾಸಕರು

---------ಇತಿಹಾಸ ವಿಭಾಗ:----------

ಡಾ ಬಿ ಶ್ರೀಧರ ನ್ಯಾಕ್ ಎಂ.ಎ, ಬಿ.ಎಡ್., ಪಿ.ಹೆಚ್.ಡಿ.	ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು
ಡಾ ಪ್ರಮೋದ್ ಎಂ ಜಿ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು

---------ಅರ್ಥಶಾಸ್ತ್ರ ವಿಭಾಗ:----------

ಡಾ ಅರುಣ್ ಪ್ರಕಾಶ್ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು
ಡಾ ವಿಷ್ಣು ಕುಮಾರ್ ಎ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು
ಡಾ ಮಲ್ಲಿಕಾ ವಿ ಎಂ.ಎ., ಪಿ.ಹೆಚ್.ಡಿ.	ಉಪನ್ಯಾಸಕರು
ಶ್ರೀ ಗೋವಿಂದರಾಜ ಶರ್ಮಾ ಎಂ.ಎ.	ಉಪನ್ಯಾಸಕರು

---------ಸಮಾಜಶಾಸ್ತ್ರ ವಿಭಾಗ:----------

ಶ್ರೀಮತಿ ವಿದ್ಯಾ ಎಸ್ ಎಂ.ಎ.	ಉಪನ್ಯಾಸಕರು ಹಾಗೂ ವಿಭಾಗ ಮುಖ್ಯಸ್ಥರು

---------ರಾಜ್ಯಶಾಸ್ತ್ರ ವಿಭಾಗ:----------

ಶ್ರೀಮತಿ ಅನಿತಾ ಕಾಮತ್ ಕೆ ಎಂ.ಎ., ಎಂ.ಫಿಲ್.	ಉಪನ್ಯಾಸಕರು
ಶ್ರೀಮತಿ ಕವಿತಾ ಬಿ ಎಂ.ಎ.	ಉಪನ್ಯಾಸಕರು

--------- ವಾಣಿಜ್ಯ ವಿಭಾಗ:----------

ಡಾ ರವಿಕಲಾ ಎಂ.ಕಾಂ., ಎಂ.ಫಿಲ್., ಪಿ.ಹೆಚ್.ಡಿ	ಉಪನ್ಯಾಸಕರು ಹಾಗೂ ವಾಣಿಜ್ಯ ವಿಭಾಗ ಮುಖ್ಯಸ್ಥರು
ಡಾ ವಿಜಯ ಸರಸ್ವತಿ ಎಂ.ಕಾಂ., ಪಿ.ಹೆಚ್.ಡಿ.	ಉಪನ್ಯಾಸಕರು
ಶ್ರೀಮತಿ ವಿದ್ಯಾ ಕೆ ಎನ್ ಎಂ.ಕಾಂ.	ಉಪನ್ಯಾಸಕರು
ಶ್ರೀ ಬಿ ಅತುಲ್ ಶೆಣೈ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಅಂಕಿತಾ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಅಕ್ಷತಾ ನಾಯಕ್ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಭಾಗ್ಯಶ್ರೀ ಕೆ ಎಂ.ಕಾಂ.	ಉಪನ್ಯಾಸಕರು
ಶ್ರೀ ಶ್ರೀನಾಥ್ ಬಿ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ವಿನುತಾ ಕೆ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಜ್ಯೋತಿ ಎಂ ಎಂ ಎಂ.ಕಾಂ.	ಉಪನ್ಯಾಸಕರು
ಶ್ರೀ ಪುನೀತ್ ಎಸ್ ಎಂ.ಕಾಂ.	ಉಪನ್ಯಾಸಕರು
ಶ್ರೀ ವರ್ಷಿತ್ ಎಂ.ಕಾಂ.	ಉಪನ್ಯಾಸಕರು
ಶ್ರೀ ಮುಕುಂದಕೃಷ್ಣ ಕೆ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಮಂಜುಳಾ ಡಿ ಎಂ.ಕಾಂ.	ಉಪನ್ಯಾಸಕರು
ಶ್ರೀಮತಿ ಪ್ರಶ್ಮಿತಾ ಎಂ ಎಂ.ಕಾಂ.	ಉಪನ್ಯಾಸಕರು
ಕು ವಿದ್ಯಾಶಾರದ ಎಂ.ಕಾಂ.	ಉಪನ್ಯಾಸಕರು

-------- ವ್ಯವಹಾರ ನಿರ್ವಹಣೆ ವಿಭಾಗ:---------

ಶ್ರೀಮತಿ ರೇಖಾ ಪಿ ಎಂ.ಕಾಂ.	ಉಪನ್ಯಾಸಕರು ಹಾಗೂ ವ್ಯವಹಾರ ನಿರ್ವಹಣೆ ವಿಭಾಗ ಮುಖ್ಯಸ್ಥರು
ಶ್ರೀಮತಿ ಅನ್ನಪೂರ್ಣ ಪಿ ಜೆ ಎಂ.ಕಾಂ.	ಉಪನ್ಯಾಸಕರು
ಕು ದೀಪಿಕಾ ಎಸ್ ಎಂ.ಕಾಂ.	ಉಪನ್ಯಾಸಕರು
ಶ್ರೀ ಗೌತಮ್ ಪೈ ಬಿ ಎಂ.ಬಿ.ಎ.	ಉಪನ್ಯಾಸಕರು
ಶ್ರೀ ಕಿಶನ್ ಎನ್ ರಾವ್ ಎಂ.ಬಿ.ಎ.	ಉಪನ್ಯಾಸಕರು

--------ದೈಹಿಕ ಶಿಕ್ಷಣ ವಿಭಾಗ:---------

ಶ್ರೀ ರವಿಶಂಕರ್ ವಿ ಎಸ್ ಬಿ.ಕಾಂ., ಎಂ.ಪಿ.ಎಡ್., ಎಂ.ಫಿಲ್.	ದೈಹಿಕ ನಿರ್ದೇಶಕರು
ಡಾ ಜ್ಯೋತಿ ಕುಮಾರಿ ಎಂ.ಪಿ.ಎಡ್., ಪಿ.ಹೆಚ್.ಡಿ.	ದೈಹಿಕ ನಿರ್ದೇಶಕರು
ಶ್ರೀ ಯತೀಶ್ ಕುಮಾರ್ ಬಿ ಎಂ.ಪಿ.ಎಡ್.	ದೈಹಿಕ ನಿರ್ದೇಶಕರು

--------ಗ್ರಂಥಾಲಯ ವಿಭಾಗ:---------

ಶ್ರೀಮತಿ ಟಿ ವಿಜಯಾ ಬಿ.ಎ., ಎಂ.ಲಿಬ್.	ಗ್ರಂಥಾಲಯ ಸಹಾಯಕಿ
ಶ್ರೀಮತಿ ದಿವ್ಯಾ ಡಿ ರಾವ್ ಡಿ.ಲಿಬ್.	ಗ್ರಂಥಾಲಯ ಸಹಾಯಕಿ

--------ಕಛೇರಿ ವಿಭಾಗ:---------

ಶ್ರೀ ಗುರುರಾಜ್ ಕೆ ಬಿ.ಎ,	ದ್ವಿತೀಯ ದರ್ಜೆ ಸಹಾಯಕರು
ಶ್ರೀಮತಿ ವೇದಾವತಿ ಎಸ್ ಬಿ.ಎ	ದ್ವಿತೀಯ ದರ್ಜೆ ಸಹಾಯಕರು
ಶ್ರೀಮತಿ ಶುಭಾ ಎಸ್ ರಾವ್ ಬಿ.ಕಾಂ	ದ್ವಿತೀಯ ದರ್ಜೆ ಸಹಾಯಕರು
ಶ್ರೀಮತಿ ದಿವ್ಯಾ ಬಿ ಬಿ.ಕಾಂ	ದ್ವಿತೀಯ ದರ್ಜೆ ಸಹಾಯಕರು
ಶ್ರೀ ತೋಟರ್ ಎಮ್ ಎಸ್ ಡಿ. ಇನ್ ಕಂ.ಸೈನ್ಸ್.	ಪ್ರಥಮ ದರ್ಜೆ ಸಹಾಯಕರು
ಶ್ರೀ ಕೆ ನಾರಾಯಣ ನಾಯ್ಕ	ದ್ವಿತೀಯ ದರ್ಜೆ ಸಹಾಯಕರು
ಶ್ರೀ ಜಗನ್ನಾಥ ಬಿ.ಕಾಂ.	ದ್ವಿತೀಯ ದರ್ಜೆ ಸಹಾಯಕರು
ಕು. ವೇದಾವತಿ ಎನ್ ಬಿ.ಕಾಂ.	ದ್ವಿತೀಯ ದರ್ಜೆ ಸಹಾಯಕರು
ಶ್ರೀ ಪುನೀತ್ ಕೆ ಎಸ್ ಎಂಸಿಎನ್‌ಸಿ., ಸಿಸಿಎನ್‌ಎ	ಕಂಪ್ಯೂಟರ್ ಸಹಾಯಕರು
ಕು ನಿರೀಕ್ಷಾ ಎಚ್ ಬಿ.ಸಿ.ಎ.	ಕಂಪ್ಯೂಟರ್ ಪ್ರಯೋಗಾಲಯ ಸಹಾಯಕರು

--------ನಾಲ್ಕನೇ ದರ್ಜೆ ಸಿಬ್ಬಂದಿ:----------

ಶ್ರೀ ಯನ್ ಮೋಹನ	ಅಟೆಂಡರ್
ಶ್ರೀ ಕದುರಪ್ಪ	ಅಟೆಂಡರ್
ಶ್ರೀ ಜಿ ಇ ಚಂದ್ರಶೇಖರ	ಅಟೆಂಡರ್
ಶ್ರೀ ಶಿವಕುಮಾರ ಎಚ್	ಅಟೆಂಡರ್
ಶ್ರೀ ಶಿವರಾಮ ಹೆಚ್	ಅಟೆಂಡರ್
ಶ್ರೀ ಸೀತಾರಾಮ ಕುಲಾಲ್	ಅಟೆಂಡರ್
ಶ್ರೀ ರಾಜೇಶ ಕೆ	ಅಟೆಂಡರ್
ಶ್ರೀ ನಾರಾಯಣ ಕೆ	ಅಟೆಂಡರ್
ಶ್ರೀ ದಿನೇಶ ಪಿ	ಅಟೆಂಡರ್
ಶ್ರೀ ಪ್ರಮೋದ್	ಅಟೆಂಡರ್
ಶ್ರೀ ಗಣೇಶ	ಅಟೆಂಡರ್
ಶ್ರೀ ಮಹೇಶ್	ಅಟೆಂಡರ್
ಶ್ರೀ ಪಿ ಜಯರಾಮ	ಅಟೆಂಡರ್
ಶ್ರೀ ನರೇಶ್	ಅಟೆಂಡರ್
ಶ್ರೀ ಕೆ ರವೀಂದ್ರಕಾರಂತ	ಅಟೆಂಡರ್
ಶ್ರೀಮತಿ ಸೇಸಮ್ಮ	ಪರಿಚಾರಿಕೆ
ಶ್ರೀಮತಿ ಗಿರಿಜ	ಸ್ವಚ್ಛತಾ ಪರಿಚಾರಿಕೆ
ಶ್ರೀಮತಿ ಹೇಮಾವತಿ	ಸ್ವಚ್ಛತಾ ಪರಿಚಾರಿಕೆ
ಶ್ರೀಮತಿ ಲೀಲಾವತಿ	ಸ್ವಚ್ಛತಾ ಪರಿಚಾರಿಕೆ

Nationality through Education	ಶಿಕ್ಷಣದ ಜೊತೆ ರಾಷ್ಟ್ರೀಯ ಚಿಂತನೆ
Enlightenment through Education	ಶಿಕ್ಷಣದ ಜೊತೆ ಆಧ್ಯಾತ್ಮ ಚಿಂತನೆ
Cultural identity through Education	ಶಿಕ್ಷಣದ ಜೊತೆ ಸಂಸ್ಕೃತಿ ಚಿಂತನೆ

COLLEGE ACTIVITIES- STAFF IN CHARGE 2021-22

No	Committees/ Association/ Activities	Co-ordinators / Staff in Charge
1	Fine Arts Association 1) Vivekananda Jayanthi & College Competitions 2) Intercollegiate Competitions 3) Talent Day	Dr. Shrisha Kumar M.K., Ms.Rekha Nair, Ms.Varsha Moleyar, Ms.Vinutha K, Ms.Akshatha Nayak, Ms. Jyothi M.M, Ms. Maithri Bhat, Attenders : Mr. Rajesh, Mr. Pramod
2	Science Association	Ms. Nisha N. Ms Lavanya C K, Dr. Sowmithra K
3	Humanities Association	Dr. Shridhara Naik B, Ms.Vidya S, Ms. Saraswsathi C K
4	Commerce Association	Ms. Akshatha Nayak, Ms.Ankitha, Ms. Jyothi M.M
5	Management Association	Ms. Annapoorna P.G, Mr. Gowtham Pai B
6	Political Form, Human Rights and Consumer Form	Ms.Anitha Kamath K & Ms. Kavitha B
7	N.S.S Activities : Co-ordinators	Mr. Srinath B, Ms. Vidya S
8	Red Cross Society	Dr. Arun Prakash, Dr. Durgarathna C
9	National Codet Corps (N.C.C.)	Lt. B Atul Shenoy
10	Rover Scouts & Rangers	Dr K.S. Ishwara Prasad, Mr. Puneeth S, Ms. Deepika S, Ms. Divyashree G
11	Nature Club	Dr. Smitha P.G, Mr. Chandrashekhar G.E. (Attender)
12	Literary Club	Mr. Balakrishna H, Ms. Rekha Nair
13	Kannada Sangha	Dr. Geetha Kumari T, Ms. Bhavya P R, Ms. Divya D Rao (Lib), Mr. Narayana K (Attender)
14	Hindi Sangha	Dr. Durgarathna C, Ms. Pooja Y.D

15	Sanskrita Sangha	Dr. Umadevi M
16	Tulu Sangha	Mr. Narasimha Bhat N, Dr.Manamohana M,
17	I.T. Club	Ms. Shwethalakshmi K.
18	1) Student Decipline 2) Swatcha Campus	Mr. Prakash Kumar P, Student Welfare officers and All Academic Advisors Mr. Srinath B.
19	Faculty Development Cell	Prof. Shiva Prasad K.S & Mr. Balakrishna H. Prof. Narasimha Bhat N, Dr Ravikala, Dr Ishwar Prasad K.S., Dr Shreesha Bhat
20	Ragging Prevention Cell/Anti Ragging Committee	Prof. Krishna Karanth K, Dr.Shreedhara Naik B
21	Student Greivance Redressal Cell	Prof. Shivaprasad K S and All Academic Advisors
22	Student Welfare Officers	Arts Section : Dr. Arun Prakash, Dr. Shridhar H.G, Ms. Ambika N R, Ms. Rekha Nair, Commerce /BBA Section: Ms. Annapoorna P.G., Lt. B Athul Shenoy, Ms. Bhagyashree K, Mr. Srinath B., Ms. Deepika S. Science Section : Mr. P Prakash Kumar, Mr. Soorya Narayana P.S., Mr. Deekashith K J, Dr. Smitha P.G
23	Alumni Association Activities	Dr. Manamohan M, Ms. Rekha. P and Sri Govindaraja Sharma
24	Annapoorna Free-Midday-Meal-Committee	Prof. Srikrishna Ganaraja Bhat S and Academic Advisors all classes
25	Student Mentoring & Counciling	Dr. Arun Prakash & Ms. Nisha,

26	i) Womens Cell	Ms. Vidya S, Ms. Annapoorna P.G., Ms. Bhagyashree K
	ii) Women Sexual Harassment Prevention Cell	Dr.Geetha Kumari T, Ms. Vinutha K, Ms. Ankitha
	iii) Lady Students' Grievance Redressal Cell	Ms. Anitha Kamath K, Ms. Lavanya C.K, Ms. Sowmya B.
27	SC/ST & Backward Communities Student Cell	Dr. Manmohana M.
28	Training / Placement & H.R.D.	Ms. Rekha.P, Mr. Sooryanarayana P.S., Ms. Anitha Kamath, Dr. Vijayasarswathi
29	Research Guidence Cell	Dr. H. G Shreedhar, Prof. Srikrishnaganaraja Bhat S, Dr. Ishwara Prasad K.S., Dr. Ravikala, Mr Prakash Kumar P
30	Parent Teacher Association Activities	Dr. Shridhar Naik B, Prof. Shivaprasad K.S
31	Jagruthi' Annual Magazine and 'Jagruthi' Wall Magazine	Dr. Manamohana M, Ms. Manjula D., Dr. Geetha Kumari T., Mr. Mukunda Krishna K and Ms. Shwetha Lakshmi K., Ms. Soundarya B, Ms. Varsha Moleyar
32	Photography, Radio Panchajanya & Media Centre	Dr.Shreesha Kumar M.K, Ms.Bhavya P.R, Ms. Vidhya S, Dr. Vishnu Kumar A., Ms Deepika S, Mr. Deekashith K J, Ms. Seema P.J, Mr. Santhosh
33	Social Protection Cell	Ms. Divyashree G.
34	Language Laboratory	Ms. Ambika N.R., Ms.Rekha Nair
35	Health Centre	Dr. Arun Prakash, Ms. Ambika N.R. & All SWO's
36	Yaksharanjini	Mr Govindaraja Sharma, Mr.Varshith, Mr. Narayana Kumbra-Attender, Mr. Mohan N - Attender
37	Election Literacy Club	Dr. Vishnu Kumar A & Dr. Pramod M.G. HoDs of Arts department
38	College Website	Mr. Gurukiran Bhat, Mr. Deekshith K.J

39	Scholarship Port	Ms. Jeevitha N.K., Ms. Varsha Moleyar, Dr. Pramod M.G, Ms. Akshatha Nayak, Ms. Deepika S.
40	Bhavishya Ghataka: CA/CS	Ms. Annapoorna P.G., Ms. Lavanya C.K., Ms. Suchitra
41	Enterprenneurship Devt. Cell	Dr. Ravikala, Ms. Rekha P
42	Staff Council/Academic Cell/Planning Committee/ Quality Management Cell/ Purchase Committee/ Public Grievance Redressal Cell	Principal
43	Staff - Representative to the Governing Council	Dr. Shreedhara Naik B.
44	Internal Quality Assurance Cell and NAAC	Prof. Shivaprasad K S - Co-ordinator Sri. Prakash Kumar P. Co-Co-Ordinator
45	Staff Grievance Redressal Cell President & Secretary	Staff Representative to Governing Council
46	Examination & Time Table	Mr. Prakash Kumar P, Mr. Deekshith K.J., Ms.Suprabha A., Mr. Puneeth S.
47	Student Attendence and Attendance List	Students welfare officers and Examination Committee members
48	Hostel Committee	SWO's
49	Sports Committee	Mr. Ravishankar V.S., Mr. Yatheesh Kumar B, Ms. Lavanya C.K. Mr. Deekshith K.J., Lt. B. Athul Shenoy, Mr. Dinesh (Attender)
50	College Endoment Prizes	Prof. Shiva Prasad K.S., Ms. Suprabha A

51	Shivarama Karantha Adyayana Kendra	Dr. H.G Sreedhara, Dr Manamohana M
52	Certificate Courses	Ms. Rekha P., Mr. Sooryanarayana P.S. (Placement Cell Convenors), Ms. Anitha Kamath K, Dr. Vijayasarswathi & All HoD's
53	Museum & Devt - Studies in History & Heritage Club	Dr. Shridhara Naik B.
54	College Calander & Prospectus	Dr. Manamohana M.
55	Stock Maintenance	Principal, Prof. Krishna Karanth & Mr. Prakash Kumar P.
56	Grama Vikasa Yojana	Mr. Vishnu Kumar A., Dr. Pramod M.G.

ನಮಗೆ ಬೇಕಾದುದು ಕಬ್ಬಿಣದ ಸ್ನಾಯುಗಳು, ಉಕ್ಕಿನ ನರಗಳು ಮತ್ತು ಸಿಡಿಲಿನಂಥ ಮನಸ್ಸುಗಳು. ಅಂತಹ ಕೆಲವೇ ತರುಣರಿಂದ ದೇಶವ ಭವಿಷ್ಯವನ್ನು ಬದಲಾಯಿಸಬಹುದು.

****

ಶಿಕ್ಷಣವೆಂದರೆ ವ್ಯಕ್ತಿತ್ವ ನಿರ್ಮಾಣ, ವ್ಯಕ್ತಿತ್ವ ನಿರ್ಮಾಣದ ಮೂಲಕ ಚಾರಿತ್ರ್ಯ ನಿರ್ಮಾಣ, ಚಾರಿತ್ರ್ಯ ನಿರ್ಮಾಣದಿಂದ ಮಾತ್ರವೇ ರಾಷ್ಟ್ರ ನಿರ್ಮಾಣ

– ಸ್ವಾಮಿ ವಿವೇಕಾನಂದ

VIVEKANANDA COLLEGE PUTTUR

ACADEMIC ADVISORS 2021-22

Sl. No.	Class	Name of Academic Adviser
1	I BA (HP,EP)	Ms Anitha Kamath K
2	I BA (HS,ES)	Ms Vidya S
3	I BA (HEng, JEng,EEng)	Mr. Balakrishna H
4	I BA (HK,JK)	Dr Shreedhara H G
5	I BSc (PC,PCs)	Ms Varsha Moleyar
6	I B.Sc (PM,MCs)	Ms Jyothi V
7	I B.Sc (BZ, BC)	Dr Smitha P G
8	I B.Sc (CZ, CM)	Ms Nisha N
9	I BCA – A	Mr Sooryanarayana P S
10	I BCA – B	Mr Prakash Kumar P
11	I B.Com – A	Ms Manjula D
12	I B.Com – B	Ms Prashmitha M
13	I B.Com – C	Mr Mukundakrishna K
14	I BBA	Ms Annapoorna P G
15	II BA (HEP+HES)	Dr Arun Prakash
16	II BA (HEE+HJE)	Ms Rekha Nair
17	II BA (HJE+HJK+HEK)	Dr Geetha Kumari T
18	III BA (HEP,HEE,HEK)	Dr Shridhar Naik B
19	III BA (HJE,HJK)	Ms Bhavya P R
20	II BSc-A PMC	Mr Krishna Karanth K
21	II B.Sc-B PMC/PMCs/PME	Mr Deekshith K J
22	II B.Sc-C BZC	Dr Ishwaraprasad K S
23	III BSc-A PMC	Ms.Lavanya C.K
24	III B.Sc-B PMC/PMCs/PME	Mr.Shivaprasad K.S
25	III B.Sc-C BZC	Mr.Srikrishna Ganaraja Bhat S
26	II BCOM-A	Ms Vinutha K
27	II BCOM-B	Ms Jyothi M M
28	II BCOM-C	Mr Puneeth S
29	III BCOM-A	Lt Athul Shenoy B
30	III BCOM-B	Mr Srinath B
31	III BCOM-C	Ms Bhagyashree K
32	III BCOM-D	Ms Ankitha
33	III BCOM-E	Ms Akshatha Nayak
34	II BBA	Ms Deepika S
35	III BBA	Mr Gowtham Pai B
38	II BCA – A	Ms Suchithra
39	III BCA – A	Ms.Shwetha Lakshmi K
40	III BCA-B	Mr Gurukiran B

ವಿವೇಕಾನಂದ ಮಹಾವಿದ್ಯಾಲಯ

(ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದ ಸಂಸ್ಥೆ)

ನೆಹರು ನಗರ, ಪುತ್ತೂರು – 574 203

ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ

ವಿವೇಕಾನಂದ ಮಹಾವಿದ್ಯಾಲಯದ ಧ್ಯೇಯ

1. ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯನ್ನೊಳಗೊಂಡ ಆಧುನಿಕ ಶಿಕ್ಷಣವನ್ನು ನೀಡುವುದು.
2. ವಿದ್ಯಾರ್ಥಿ ಸಮೂಹದಲ್ಲಿ ಸೇವಾ ಮನೋಭಾವನೆ, ರಾಷ್ಟ್ರಭಕ್ತಿ, ಚೈತನ್ಯವನ್ನು ಉದ್ದೀಪನಗೊಳಿಸುವುದು.
3. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಜತೆಗೆ ಉತ್ತಮ ಗುಣಗಳನ್ನು ಹೊಂದಿದ ಶ್ರೇಷ್ಠ ವ್ಯಕ್ತಿಗಳನ್ನಾಗಿ ರೂಪಿಸುವುದು
4. ವಿದ್ಯಾರ್ಥಿ ಸಮುದಾಯದಲ್ಲಿ ಒಳ್ಳೆಯ ಗುಣ ನಡತೆ, ಓದುವಿಕೆ, ಬರಹ, ಚಿಂತನೆ ಇತ್ಯಾದಿ ಸದಭಿರುಚಿಗಳನ್ನು ಮೈಗೂಡಿಸುವಂತೆ ನಿರಂತರ ಪ್ರೇರಣೆ ನೀಡುವುದು ಮತ್ತು ಈ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುವ ದೃಷ್ಟಿಯಲ್ಲಿ ಮಾರ್ಗದರ್ಶನ ನೀಡುವುದು.
5. ಸ್ವಯಂ ಶಿಸ್ತು, ಆತ್ಮವಿಶ್ವಾಸವನ್ನು ವೃದ್ಧಿಸುವಂತೆ ವಿದ್ಯಾರ್ಥಿಗಳನ್ನು ತಯಾರುಮಾಡುವುದು.
6. ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸದ ಜತೆಗೆ ಜೀವನದ ಕಲೆಗಳನ್ನು ಬೆಳೆಸುವುದು.

ಈ ವಿದ್ಯಾಲಯದ ವಿದ್ಯಾರ್ಥಿಯಾಗಿ ಕರ್ತವ್ಯ

1. ವಿಶ್ವವಿದ್ಯಾಲಯದ ಶಿಕ್ಷಣವು ಶ್ರಮ, ಶ್ರದ್ಧೆ, ಪ್ರಾಮಾಣಿಕತೆಯನ್ನು ಬಯಸುವ ಒಂದು ಸುವರ್ಣ ಅವಕಾಶವೆಂದು ತಿಳಿಯುವುದು.
2. ವಿದ್ಯಾಲಯದ ಒಳಗೆ, ಹೊರಗೆ ಶ್ರೇಷ್ಠ ಆಚರಣೆ ನಡತೆಗಳಿಂದ ಈ ವಿದ್ಯಾಲಯದ ಕೀರ್ತಿ, ಘನತೆಗಳನ್ನು ಕಾಪಾಡುವುದು.
3. ಮಹಿಳೆಯರ ಬಗ್ಗೆ ಗೌರವಯುತವಾಗಿಯೂ, ವಿನಯಶೀಲತೆಯಿಂದಲೂ ನಡೆದುಕೊಳ್ಳುವುದು.
4. ವಿದ್ಯಾಲಯದ ಆಸ್ತಿಪಾಸ್ತಿಗಳನ್ನು ಸ್ವಂತ ಆಸ್ತಿಪಾಸ್ತಿಗಳಂತೆ ತಿಳಿದು ಕಾಪಾಡುವುದು ಹಾಗೂ ಸಂರಕ್ಷಿಸುವುದು.

ಪ್ರವೇಶ ನಿಯಮ ನಿಬಂಧನೆಗಳು

1. ಜಾತಿಮತಗಳ ಬೇಧವಿಲ್ಲದೆ ಅಪೇಕ್ಷಿತ ವಿದ್ಯಾರ್ಹತೆ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವಿದೆ.

2. ಮಂಗಳೂರು ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಿದ ಕೊನೆಯ ದಿನಾಂಕದ ಅನಂತರ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುವುದಿಲ್ಲ.

3. ಕಾಲೇಜು ನೀಡುವ ಪ್ರವೇಶಾವಕಾಶವೆಲ್ಲವೂ ತಾತ್ಕಾಲಿಕವಾಗಿದ್ದು, ವಿಶ್ವವಿದ್ಯಾನಿಲಯದ ಅಂಗೀಕಾರವಾದ ಮೇಲೆಯೆ ಪ್ರವೇಶಾತಿ ಅಂತಿಮ.

4. ಪ್ರವೇಶ ಪಡೆದ ಅನಂತರ ಕಾಲೇಜನ್ನು ಬಿಟ್ಟು ಹೋಗಲು ಬಯಸುವ ವಿದ್ಯಾರ್ಥಿಗೆ ತಾನು ಪಾವತಿ ಮಾಡಿರುವ ಯಾವುದೇ ಶುಲ್ಕವನ್ನು ಮರಳಿ ಪಡೆಯಲು ಅವಕಾಶವಿಲ್ಲ.

5. ಯಾವನೇ ವಿದ್ಯಾರ್ಥಿ ಸುಳ್ಳು ದಾಖಲೆ, ಪ್ರಮಾಣ ಪತ್ರ ಅಥವಾ ಬೇರೆ ಯಾವುದೇ ತಪ್ಪು ಮಾಹಿತಿ ಸಾಕ್ಷ್ಯಗಳನ್ನು ತೋರಿಸಿ/ನೀಡಿ ಪ್ರವೇಶ ದೊರಕಿಸಿಕೊಂಡಿದ್ದಾನೆಂದು ಗೊತ್ತಾದರೆ, ಆ ವಿದ್ಯಾರ್ಥಿಯನ್ನು ಪೂರ್ತಿಯಾಗಿ ಕಾಲೇಜಿನಿಂದ ವಜಾಮಾಡಲಾಗುವುದಲ್ಲದೆ, ಅವನಿಂದ ಸಂದಾಯವಾದ ಶುಲ್ಕವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6. **ನಿಶ್ಚಿತ ದಿನಾಂಕದಂದು ಶುಲ್ಕವನ್ನಾಗಲಿ ಅಥವಾ ಕನಿಷ್ಠ ಮೊದಲ ಕಂತನ್ನಾಗಲಿ ಪಾವತಿ ಮಾಡದಿರುವ ವಿದ್ಯಾರ್ಥಿಯ ಹೆಸರನ್ನು ಕಾಲೇಜಿನ ದಾಖಲೆ ಪುಸ್ತಕದಲ್ಲಿ/ ಹಾಜರಿ ಪುಸ್ತಕದಲ್ಲಿ ಸೇರಿಸಲಾಗುವುದಿಲ್ಲ** ಮತ್ತು ಆ ವಿದ್ಯಾರ್ಥಿಗೆ ತರಗತಿಗಳಿಗೆ ಹಾಜರಾಗಲು ಅನುಮತಿ ಕೊಡಲಾಗುವುದಿಲ್ಲ.

7. ಕಾಲೇಜು ಸೇರಿದ ಪ್ರತಿ ವಿದ್ಯಾರ್ಥಿ, ಪದವಿ ಶಿಕ್ಷಣದ ಪ್ರತಿವರ್ಷವೂ ವೈದ್ಯಕೀಯ ತಪಾಸಣೆ ಹೊಂದುವುದು ಅಗತ್ಯ.

8. ಬೇರೆ ಕಾಲೇಜಿನಿಂದ ಬರುವ ವಿದ್ಯಾರ್ಥಿಗಳು ಆ ಕಾಲೇಜಿನಿಂದ ಪಡೆದ ವರ್ಗಾವಣೆಯ ಹಾಗೂ ಮತ್ತಿತರ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು.

9. ವಿದ್ಯಾರ್ಥಿಯು ಕಾಲೇಜಿನ ಎಲ್ಲಾ ನಿಯಮಗಳನ್ನು, ಅನುಶಾಸನಗಳನ್ನು ತಿಳಿದು ಒಪ್ಪಿ ಅವುಗಳನ್ನು ಸಂತೋಷದಿಂದ ಪಾಲಿಸುತ್ತಾನೆ/ಳೆ ಎಂಬ ಸ್ಪಷ್ಟ ತಿಳುವಳಿಕೆಯಿಂದಲೇ ಅವನನ್ನು/ಳನ್ನು ಕಾಲೇಜಿಗೆ ಸೇರಿಸಿಕೊಳ್ಳಲಾಗುತ್ತದೆ.

10. ಪ್ರಾಚಾರ್ಯರು ಯಾವ ಕಾರಣವನ್ನು ತಿಳಿಸದೆ ಯಾವುದೇ ವಿದ್ಯಾರ್ಥಿಗೆ ಪ್ರವೇಶವನ್ನು ನಿರಾಕರಿಸಬಹುದು.

11. ಮಹಾವಿದ್ಯಾಲಯ ನಿಗದಿಪಡಿಸಿದ ಸಮವಸ್ತ್ರ ಇಲ್ಲವೆ ನಿಯಮ ನಿಬಂಧನೆಗೊಳಪಟ್ಟ ವಸ್ತ್ರವನ್ನೇ ಧರಿಸಬೇಕು. ತಪ್ಪಿದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

(ಅ) ವಿದ್ಯಾಲಯದಲ್ಲಿ

1. ವಿದ್ಯಾರ್ಥಿ ವಿದ್ಯಾರ್ಥಿನಿಯರು ಶುಚಿಯಾದ, ಸಭ್ಯವಾದ ಸಮವಸ್ತ್ರ ಧರಿಸಬೇಕು. ಇತರ ದಿನಗಳಲ್ಲೂ ಯಾವುದೇ ಬರಹ ಮತ್ತು ಚಿತ್ರಗಳಿರುವ ಉಡುಪು ಧರಿಸುವುದನ್ನು ನಿಷೇಧಿಸಲಾಗಿದೆ.

2. ದಿನದಲ್ಲಿ ಪ್ರಥಮ ಬಾರಿಗೆ ಭೇಟಿಯಾದಾಗ ಅಧ್ಯಾಪಕರನ್ನು ವಂದಿಸಬೇಕು.

3. **ಕಾಲೇಜಿನಿಂದ ನೀಡಲಾದ ಗುರುತು ಚೀಟಿಯನ್ನು ಸದಾ ಧರಿಸಬೇಕು ಹಾಗೂ ಅನಧಿಕೃತ ಪುಸ್ತಕಗಳನ್ನಾಗಲೀ, ಪತ್ರಿಕೆಗಳನ್ನಾಗಲೀ ಕಾಲೇಜಿಗೆ ತರಬಾರದು.**

4. ಕಾಲೇಜಿನ ವಿದ್ಯಾರ್ಥಿಗಳು ಪ್ರಾಂಶುಪಾಲರ ಅನುಮತಿಯಿಲ್ಲದೆ ಹೊರಗಿನ ಬೇರೆ ಕ್ರೀಡಾ ತಂಡಗಳಲ್ಲಿ ಭಾಗವಹಿಸಬಾರದು.

5. ಅನಧಿಕೃತ ಸಂಘಟನೆಗಳ ಪ್ರಚಾರ ಹಾಗೂ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ.

6. **ವಿದ್ಯಾರ್ಥಿಗಳು ದ್ವಿ ಚಕ್ರವಾಹನ (ಸ್ಕೂಟರ್, ಮೋಟಾರ್ ಸೈಕಲ್, ಮೊಪೆಡ್ ಇತ್ಯಾದಿ) ಅಥವಾ ನಾಲ್ಕು ಚಕ್ರಗಳ ವಾಹನ(ಕಾರು, ಜೀಪು ಇತ್ಯಾದಿ)ಗಳನ್ನು ತರುವುದಾದಲ್ಲಿ ಅಂತಹ ವಿದ್ಯಾರ್ಥಿಗಳು ತಮ್ಮ ವಾಹನದ ರಿಜಿಸ್ಟ್ರೇಶನ್ ದಾಖಲಾತಿ ಮತ್ತು ಚಾಲನ ಪರವಾನಗಿಯ (ಡ್ರೈವಿಂಗ್ ಲೈಸನ್ಸ್) ಫೋಟೋಸ್ಟೇಟ್ ಪ್ರತಿಯೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಪ್ರಾಂಶುಪಾಲರ ಅನುಮತಿ ಪಡೆದುಕೊಳ್ಳುವುದು. ಈ ಕುರಿತು ಕಾಲಕಾಲಕ್ಕೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರಿಗೆ ಇರುತ್ತದೆ.**

   ಕಾಲೇಜಿನಿಂದ ಕೊಡಲ್ಪಟ್ಟ ವಾಹನ ಪಾಸನ್ನು ಹೊಂದಿರತಕ್ಕದ್ದು. ವಾಹನ ನಿಯಮಗಳನ್ನು ಪಾಲಿಸದಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳು ಬೇರೆ/ಬಾಡಿಗೆ ವಾಹನಗಳಲ್ಲಿ ಕಾಲೇಜಿಗೆ ಬರುವುದಾದರೆ ಆ ವಾಹನದ ರಿಜಿಸ್ಟ್ರೇಶನ್ ಸಂಖ್ಯೆ, ವಾಹನದ ಮಾಲಕರೊಂದಿಗೆ ಸಂಬಂಧ ಇತ್ಯಾದಿ ಮಾಹಿತಿಯನ್ನು ಕಚೇರಿಗೆ ಕೊಡತಕ್ಕದ್ದು.

7. ಗುಂಪು ಕಟ್ಟಿಕೊಂಡು ಪರಸ್ಪರ ಹೊಡೆದಾಡುವ ವಿದ್ಯಾರ್ಥಿಗಳ ಮೇಲೆ ಪ್ರಾಚರ್ಯರು ಕಠಿಣ ಶಿಸ್ತು ಕ್ರಮ ಕೈಗೊಳ್ಳುವರು.

8. ಕಾಲೇಜಿಗೆ ಸಂಬಂಧಿಸದ ಬ್ಯಾನರ್, ಭಿತ್ತಿಪತ್ರ, ಕರಪತ್ರ, ಮನವಿ ಪತ್ರಗಳನ್ನು ಪ್ರಾಂಶುಪಾಲರ ಅನುಮತಿಯನ್ನು ಪಡೆಯದೆ ತರಕೂಡದು. ಕಾಲೇಜು ಹಾಗೂ ಕಾಲೇಜು ಆವರಣ ಗೋಡೆಗೆ ಹಚ್ಚುವಂತಿಲ್ಲ.

9. ಯಾವುದೇ ದೇಣಿಗೆ, ಸಹಾಯಧನ ಇತ್ಯಾದಿಗಳನ್ನು ಪ್ರಾಂಶುಪಾಲರ ಅನುಮತಿ ಇಲ್ಲದೇ ಪಡೆಯುವಂತಿಲ್ಲ. ಅನುಮತಿ ಇಲ್ಲದೇ ಸಂಗ್ರಹಿಸುವುದು ಕಂಡುಬಂದರೆ ಅಂತಹ ವಿದ್ಯಾರ್ಥಿಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಲಾಗುವುದು.

ಹುಡುಗರಿಗಾಗಿ ಸಮವಸ್ತ್ರದ ನಿಯಮಗಳು:

- ❖ ಕಾಲೇಜು ಸೂಚಿಸಿದ ಬಟ್ಟೆಯಲ್ಲಿ ನಿಯಮಾನುಸಾರ ಹೊಲಿಸಿದ ಸಮವಸ್ತ್ರವನ್ನೇ ವಿದ್ಯಾರ್ಥಿಗಳು ಧರಿಸತಕ್ಕದ್ದು. ಟಿ–ಶರ್ಟ್‌ಗಳನ್ನು ಧರಿಸುವಂತಿಲ್ಲ.
- ❖ ನವೀನ/ವಿಚಿತ್ರ ವಿನ್ಯಾಸಗಳಿರದ ಅರ್ಧ ತೋಳುಗಳ ಉತ್ತಮ ರೀತಿಯ ಸಮವಸ್ತ್ರಗಳನ್ನು ವಿದ್ಯಾರ್ಥಿಗಳು ಹೊಂದಿರತಕ್ಕದ್ದು.

- ಕಾಲೇಜು ಸೂಚಿಸಿರುವ ಕಾಲು ಪೂರ್ತಿ ಆವರಿಸುವಂತೆ ಉದ್ದ ಕಾಲಿನ ಸಾಮಾನ್ಯ ರೀತಿಯ ಪ್ಯಾಂಟ್‌ಗಳನ್ನೇ ಹೊಲಿಸಿ ಧರಿಸಬೇಕು. ಬ್ಯಾಗಿ, ಜೀನ್ಸ್, ಕಾರ್ಗೋ, ಲೋ ವೈಸ್ಟ್, ಪೆನ್ಸಿಲ್ ಅಥವಾ ಕ್ಯಾರೆಟ್ ಕಟ್, ಟೈಟ್ ಫಿಟ್, ಬರ್ಮುಡಾ, ಥ್ರೀ ಫೋರ್ತ್ ಅಥವಾ ಇನ್ಯಾವುದೋ ವಿನ್ಯಾಸದ ಪ್ಯಾಂಟ್‌ಗಳನ್ನು ಧರಿಸುವಂತಿಲ್ಲ.
- ಕಪ್ಪು ಬಣ್ಣದ ಉತ್ತಮ ರೀತಿಯಲ್ಲಿ ಕಾಣುವ ಬೆಲ್ಟ್‌ಗಳನ್ನು ಧರಿಸಬೇಕು.
- ದೇಹದ ಮೇಲೆ ಟ್ಯಾಟೂಗಳನ್ನು ಬಿಡಿಸಿಕೊಳ್ಳುವುದು. ಒಂದು ಕಿವಿಯಲ್ಲಿ ಓಲೆಗಳನ್ನು ಧರಿಸುವುದು, ವಿಚಿತ್ರ ರೀತಿಯಲ್ಲಿ ಜುಟ್ಟು ಬಿಡುವುದು (pigtails) ವಿರೂಪವಾಗಿ ಕಾಣುವ ಬ್ರಾಸ್‌ಲೆಟ್‌ಗಳನ್ನು, ಬಳೆಗಳನ್ನು ಧರಿಸುವುದು. ಕೌ ಬಾಯ್ ಅಥವಾ ಜಿಪ್ಸಿಗಳಂತೆ ಕಾಣುವ ಉಡುಪು–ಟೋಪಿಗಳನ್ನು ಧರಿಸುವುದು. ಕೂಲಿಂಗ್ ಗ್ಲಾಸ್‌ಗಳನ್ನು ಧರಿಸುವುದು–ಮುಂತಾದುವುಗಳನ್ನು ಖಡ್ಡಾಯವಾಗಿ ನಿಷೇಧಿಸಲಾಗಿದೆ.
- ತಲೆಕೂದಲುಗಳನ್ನು ಸರಿಯಾದ ರೀತಿಯಲ್ಲಿ ಕತ್ತರಿಸಿ ಓರಣವಾಗಿ ಬಾಚಿಕೊಂಡು ಬರಬೇಕು. ಅತಿಯಾಗಿ ತಲೆಕೂದಲುಗಳನ್ನು ಬೆಳೆಯಲು ಬಿಡುವುದು, ತಲೆಕೂದಲುಗಳಿಗೆ ಬಣ್ಣ ಹಚ್ಚುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
- ಗಡ್ಡವನ್ನು ಸರಿಯಾಗಿ ಶೇವ್ ಮಾಡಿರಬೇಕು. ಗಡ್ಡ ಮತ್ತು ಮೀಸೆಗಳಲ್ಲಿ ಯಾವುದೇ ನವೀನ ವಿನ್ಯಾಸಗಳನ್ನು ಮಾಡಿಕೊಂಡು ಕಾಲೇಜು ಆವರಣಕ್ಕೆ ಬರುವಂತಿಲ್ಲ.
- ವಿಚಿತ್ರ ರೀತಿಯ ವಿನ್ಯಾಸದ ಮತ್ತು ಬಣ್ಣದ ಚಪ್ಪಲಿಗಳು, ಶೂಗಳನ್ನು ಧರಿಸುವಂತಿಲ್ಲ.

ಹುಡುಗಿಯರಿಗಾಗಿ ಸಮವಸ್ತ್ರದ ನಿಯಮಗಳು:

- ಕಾಲೇಜು ಸೂಚಿಸಿದ ಬಟ್ಟೆಯಲ್ಲಿ ನಿಯಮಾನುಸಾರ ಹೊಲಿಸಿದ ಸಮವಸ್ತ್ರವನ್ನೇ ವಿದ್ಯಾರ್ಥಿಗಳು ಧರಿಸತಕ್ಕದ್ದು.
- ಟಾಪ್ ಕಾಲರ್ ಹೊಂದಿರತಕ್ಕದ್ದು. Deep neck ಮತ್ತು long slit ವಿನ್ಯಾಸಗಳನ್ನು ಹೊಂದಿದ ಟಾಪ್‌ಗಳನ್ನು ಧರಿಸುವಂತಿಲ್ಲ.
- ಪ್ಯಾಂಟ್‌ಗಳು ಕಾಲೇಜು ಸೂಚಿಸಿರುವ ವಿನ್ಯಾಸದ್ದಾಗಿರಬೇಕು. ಜೀನ್ಸ್, Push ups ಮತ್ತು leggings ಗಳನ್ನು ಧರಿಸುವಂತಿಲ್ಲ.
- Stoles, ಚಿಕ್ಕ ವಿನ್ಯಾಸದ ಕುರ್ತಾಗಳನ್ನು ಧರಿಸುವಂತಿಲ್ಲ. ತಲೆಕೂದಲಿಗೆ ಬಣ್ಣ ಹಚ್ಚುವಂತಿಲ್ಲ.
- ಸಮವಸ್ತ್ರವನ್ನು ಮುಚ್ಚುವಂತಹ ಯಾವುದೇ ಹೊರವಸ್ತ್ರಗಳನ್ನು ಧರಿಸುವಂತಿಲ್ಲ. ಸ್ಕಾರ್ಫ್, ಟೋಪಿಗಳು ಇನ್ಯಾವುದೋ ಶಿರಕವಚಗಳನ್ನು ತರಗತಿಗಳಲ್ಲಿ/ಕಾಲೇಜು ಆವರಣದಲ್ಲಿ ಧರಿಸುವಂತಿಲ್ಲ.
- ಕಾಲೇಜಿನ ಮುಖ್ಯದ್ವಾರದ ಒಳಗೆ ಪ್ರವೇಶಿಸುವಾಗ ಎಲ್ಲಾ ವಿದ್ಯಾರ್ಥಿಗಳು ಖಡ್ಡಾಯವಾಗಿ ಸಮವಸ್ತ್ರದಲ್ಲಿಯೇ ಇರಬೇಕಾಗುತ್ತದೆ.

DRESS CODE FOR BOYS:

- Dress material should be Uniform prescribed by the college in the prescribed stitching pattern. No T-shirts are allowed.
- Shirts should in formal style (half sleeves only) without any design or trendy cuts.
- Trousers should in the formal style : full length-straight cut. Jeans. Baggy, cargo, Low-waist, pencil-carrot cut, tight fit, Bermuda, three forth or any other style is strictly prohibited.
- Students must wear formal in style black colour belts.
- Tattoos, ear rings, pigtails,awkward bracelets, head gears, cowboyish or gypsy appearance, visors, sun glasses etc are strictly not allowed.
- Hair style should be formal-neat, tidy, oranised and well groomed. Hair colouring is not allowed.
- Beard should be clearly shaved. All types of beard and moustache designs are prohibited.
- Hiking boots, cowboy boots and gaudy coloured footwear are strictly prohibited.

DRESS CODE FOR GIRLS:

- Dress material should be uniform prescribed by the college in the prescribed stitching pattern.
- Tops must have collar. Deep neck and long slit patterns are not allowed.
- Pants should be formal. Jeans, push ups and leggings are strictly prohibited.
- Stoles, short kurthas, colouring hair are not allowed.
- Uniform should be prominently displayed and use of scarves or head coverings is prohibited.

ಸಾಮಾನ್ಯ ನಿಯಮಗಳು:

- ಕಾಲೇಜಿನ ಆವರಣದಲ್ಲಾಗಲೀ ಕ್ರೀಡಾಂಗಣ ಮತ್ತು ವಸತಿ ಗೃಹದಲ್ಲಾಗಲೀ ವಿದ್ಯಾರ್ಥಿಗಳು ಧೂಮಪಾನ/ಮದ್ಯಪಾನ ಮಾಡುವುದನ್ನು ಜತೆಗೆ ಮಾದಕ ದ್ರವ್ಯವನ್ನು ಸೇವಿಸುವುದನ್ನು ನಿಷೇಧಿಸಲಾಗಿದೆ.
- ಅನಿಯಮಿತ ಹಾಜರಿ, ತಡವಾಗಿ ತರಗತಿಗೆ ಬರುವ ಪರಿಪಾಠ, ಅಧ್ಯಾಪಕರು ಮತ್ತು ಇತರ ನೌಕರರ ಬಗ್ಗೆ ಅವಿನಯ, ಕಾಲೇಜಿಗೆ ಸಂಬಂಧಿಸಿದ ಕೆಲಸಗಳಲ್ಲಿ ಅಧ್ಯಕ್ಷತೆ ಮತ್ತು ನಿರ್ಲಕ್ಷ್ಯ, ಅಶ್ಲೀಲ ನಡೆನುಡಿ, ಕಾಲೇಜಿನ ವಸ್ತುಗಳಿಗೆ ಹಾನಿ ಮಾಡುವಿಕೆ ಇತ್ಯಾದಿ ಕೃತ್ಯಗಳು ಶಿಕ್ಷಾರ್ಹವಾಗುತ್ತವೆ. ಪ್ರಾಂಶುಪಾಲರು ಅಂಥವರನ್ನು ಕಾಲೇಜಿನಿಂದ ವಜಾ ಮಾಡಬಹುದು.
- ಕಾಲೇಜಿನ ಆಸ್ತಿಪಾಸ್ತಿ, ಕಟ್ಟಡಗಳು, ಪುಸ್ತಕಗಳು, ಪೀಠೋಪಕರಣಗಳು, ನೀರು, ಅನಿಲ, ವಿದ್ಯುತ್ ಸ್ಥಾವರಗಳು, ದೂರವಾಣಿ, ಮರಗಿಡಗಳು ಮುಂತಾದುವುಗಳಿಗೆ ಉದ್ದೇಶ ಪೂರ್ವಕವಾಗಿ ಹಾನಿ ಮಾಡಿದಾಗ ಅಂತಹ ನಷ್ಟವನ್ನು ತುಂಬಿಸಿ ಕೊಡಬೇಕು. ಈ ಎಲ್ಲಾ ವಿಷಯಗಳಲ್ಲೂ ಪ್ರಾಂಶುಪಾಲರ ನಿರ್ಣಯವೇ ಅಂತಿಮವಾದುದು.
- ಕಾಲೇಜು ಆವರಣದ ಹೊರಗಿನ ನಡವಳಿಕೆಗೆ ಕಾಲೇಜು ಹೊಣೆಯಲ್ಲವಾದರೂ ಕಾಲೇಜಿನ ಘನತೆಗೆ ಧಕ್ಕೆ ತರುವಂಥ ದುರ್ವರ್ತನೆ ನಡೆದಲ್ಲಿ, ಪ್ರಾಂಶುಪಾಲರು ಅದನ್ನು ಗಮನಿಸಿ ತಪ್ಪಿತಸ್ಥರ ಮೇಲೆ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ಅಲ್ಲದೆ ಅಂಥಹ ವಿದ್ಯಾರ್ಥಿಗಳಿಗೆ ಮುಂದಿನ ವರ್ಷಕ್ಕೆ ಪ್ರವೇಶಾವಕಾಶವನ್ನು ನಿರಾಕರಿಸಬಹುದು ಅಥವಾ ಆ ಕೂಡಲೇ ಪ್ರವೇಶಾವಕಾಶವನ್ನು ನಿರಾಕರಿಸಬಹುದು.
- ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಹಾಗೂ ರಚನಾತ್ಮಕ ದೇಶ ಭಕ್ತಿಯನ್ನು ಮೈಗೂಡಿಸುವುದು ಕಾಲೇಜಿನ ಪ್ರಮುಖ ಚಟುವಟಿಕೆಗಳಲ್ಲಿ ಒಂದಾಗಿದೆ. ಹಾಗಿದ್ದರೂ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅವಕಾಶವಿಲ್ಲ. ಸರಕಾರದ ವಿರುದ್ಧ ಯಾವುದೇ ರಾಜಕೀಯ ಪಕ್ಷ ಅಥವಾ ಇನ್ನಿತರ ಗುಂಪಿನ ಪರವಾಗಿ ಕಾಲೇಜಿನ ಆವರಣದಲ್ಲಿ ಪ್ರಚಾರ ಪ್ರದರ್ಶನಗಳನ್ನು ನಡೆಸುವಂತಿಲ್ಲ.
- ಪ್ರಾಂಶುಪಾಲರ ಅನುಮತಿಯಿಲ್ಲದೆ ಯಾವುದೇ ಸಂಸ್ಥೆಗಳ ಸದಸ್ಯರಾಗುವುದು ಮತ್ತು ಅವುಗಳ ಪರವಾಗಿ ತರಗತಿಗಳಲ್ಲಿ ದೇಣಿಗೆ ಸಂಗ್ರಹ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
- ವಿದ್ಯಾರ್ಥಿಗಳು ಕಾಲೇಜು ಪರಿಸರ, ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯದ ಶುಚಿತ್ವವನ್ನು ಕಾಪಾಡುವುದು ಅತ್ಯಗತ್ಯವಾಗಿದೆ.
- ಸರಕಾರದ ಆದೇಶದ ಪ್ರಕಾರ ರ್‍ಯಾಗಿಂಗ್‌ನಲ್ಲಿ ಯಾವನೇ ವಿದ್ಯಾರ್ಥಿ/ ವಿದ್ಯಾರ್ಥಿನಿ ಭಾಗವಹಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು.
- ಅನಧಿಕೃತ ಪುಸ್ತಕಗಳನ್ನಾಗಲೀ, ಪತ್ರಿಕೆಗಳನ್ನಾಗಲೀ, ವಸ್ತುಗಳನ್ನಾಗಲೀ ಕಾಲೇಜಿಗೆ ತರಬಾರದು.

- ಹೆತ್ತವರು ಮತ್ತು ಪೋಷಕರೊಡನೆ ವಾಸಿಸದೆ ಇರುವ ವಿದ್ಯಾರ್ಥಿಗಳು ಕಾಲೇಜು ವಸತಿ ಗೃಹದಲ್ಲಿ ತಂಗುವುದು ಅಪೇಕ್ಷಣೀಯ. ಇದಕ್ಕೆ ಹೊರತಾಗಿ ಹೊರಗಿನ ವಸತಿ ಗೃಹಗಳಲ್ಲಿ ವಾಸ ಮಾಡಿದರೆ ಆಯಾ ಪೋಷಕರು ಮತ್ತು ವಿದ್ಯಾರ್ಥಿಗಳೇ ಜವಬ್ದಾರರಾಗಿರುತ್ತಾರೆ.
- ಕಾಲೇಜಿನ ಶಿಸ್ತನ್ನು ಉಳಿಸುವುದಕ್ಕಾಗಿ ಯಾವನೇ ವಿದ್ಯಾರ್ಥಿಯು ಕಾಲೇಜಿನಲ್ಲಿ ಮುಂದುವರಿಯುವುದು ಅಪೇಕ್ಷಿತವಲ್ಲ ಎಂದು ಆಡಳಿತ ಮಂಡಳಿಯು ಅಭಿಪ್ರಾಯಪಟ್ಟಲ್ಲಿ, ಪ್ರಾಂಶುಪಾಲರು ಕಾಲೇಜಿನ ಆಡಳಿತ ಮಂಡಳಿಯ ಸಲಹೆ ಮೇರೆಗೆ ಆ ವಿದ್ಯಾರ್ಥಿಯನ್ನು ಅಮಾನತುಗೊಳಿಸುವ ಅಧಿಕಾರ ಪಡೆದಿರುತ್ತಾರೆ.
- ಕಾಲೇಜಿನ ಆಡಳಿತ ಮಂಡಳಿಯ ಸಲಹೆಯ ಮೇರೆಗೆ ವಿದ್ಯಾರ್ಥಿಗಳು ದ್ವಿಚಕ್ರ ವಾಹನ (ಸ್ಕೂಟರ್, ಮೋಟಾರ್ ಸೈಕಲ್, ಮೊಪೆಡ್ ಇತ್ಯಾದಿ) ಅಥವಾ ನಾಲ್ಕು ಚಕ್ರಗಳ ವಾಹನ (ಕಾರು, ಜೀಪು ಇತ್ಯಾದಿ)ಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಆದೇಶದ ಪ್ರಕಾರ ವಿದ್ಯಾರ್ಥಿಗಳು ಕಾಲೇಜಿನ ಆವರಣದೊಳಗೆ ತರುವಂತಿಲ್ಲ. ತರುವುದು ಪ್ರಾಂಶುಪಾಲರ ಗಮನಕ್ಕೆ ಬಂದರೆ ಅದಕ್ಕೆ ಸೂಕ್ತ ಶಿಸ್ತು ಕ್ರಮವನ್ನು ಕೈಗೊಳ್ಳಲಾಗುವುದು.
- **ಕಾಲೇಜು ಶಿಕ್ಷಣ ಇಲಾಖೆಯ ಆದೇಶದ ಪ್ರಕಾರ ಕಾಲೇಜಿಗೆ ಮೊಬೈಲ್ ಫೋನ್ ತರಬಾರದು. ಕಾಲೇಜು ಆವರಣದಲ್ಲಿ ಅಥವಾ ತರಗತಿಗಳಲ್ಲಿ ಮೊಬೈಲ್ ಫೋನ್ ಉಪಯೋಗಿಸುತ್ತಿರುವುದು ಕಂಡುಬಂದಲ್ಲಿ ಉಪಕರಣವನ್ನು ಮುಟ್ಟುಗೋಲು ಹಾಕುವ ಅಧಿಕಾರ ಪ್ರಾಂಶುಪಾಲರಿಗಿದೆ.**

ಹಾಜರಿ ಮತ್ತು ರಜೆ

- ತರಗತಿಗಳ ವೇಳಾಪಟ್ಟಿ ಈ ಕೆಳಗಿನಂತಿದೆ. ಅದನ್ನು ಅಗತ್ಯ ಕಂಡಲ್ಲಿ ಬದಲಾಯಿಸಲಾಗುವುದು.
  ಪೂರ್ವಾಹ್ನ ಗಂಟೆ 9–00 ರಿಂದ ಸಂಜೆ 5–00 ಗಂಟೆ ತನಕ
  ಅಪರಾಹ್ನ ಗಂಟೆ 1–00 ರಿಂದ 2–00 ಗಂಟೆ ತನಕ ಊಟದ ವಿರಾಮ
  4.00 ರಿಂದ 5.00 ರವರೆಗೆ ಪಠ್ಯೇತರ ಚಟುವಟಿಕೆಗಳು ನಡೆಯತ್ತವೆ.
  ಅಗತ್ಯ ಕಂಡಲ್ಲಿ ನಿಶ್ಚಿತ ಕೆಲಸದ ವೇಳೆಯ ಹೊರತಾಗಿಯೂ ತರಗತಿಗಳನ್ನು ನಡೆಸಬಹುದು.
- ಕಾಲೇಜಿಗೆ ಬಂದ ವಿದ್ಯಾರ್ಥಿ ಅಧ್ಯಾಪಕ/ಶೈಕಣಿಕ ಸಲಹೆಗಾರರ/ಪ್ರಾಂಶುಪಾಲರ ಅನುಮತಿ ಪಡೆಯದೇ ಕಾಲೇಜಿನ ಆವರಣದಿಂದ ಹೊರಹೋಗಲು ಅನುಮತಿಯಿರುವುದಿಲ್ಲ.
- **ಪ್ರತಿ ತರಗತಿಯ ಆರಂಭದಲ್ಲಿ ಉಪಸ್ಥಿತರಿಲ್ಲದ ವಿದ್ಯಾರ್ಥಿಯನ್ನು ಆ ಅವಧಿಗೆ ಗೈರು ಹಾಜರಿಯೆಂದು ಗುರುತಿಸಲಾಗುವುದು.**
- ತಡವಾಗಿ ಬರುವ ವಿದ್ಯಾರ್ಥಿಗಳು ತರಗತಿಯಲ್ಲಿರುವ ಅಧ್ಯಾಪಕರ ಅನುಮತಿ ಪಡೆಯದೆ ಒಳಗೆ ಪ್ರವೇಶಿಸಬಾರದು.
- (ಅ) ಯೋಗ್ಯ ಕಾರಣಗಳಿಲ್ಲದೆ, ತರಗತಿಗಳಿಗೆ ಪದೇ ಪದೇ ಗೈರುಹಾಜರಾಗುವ ಅಥವಾ ತರಗತಿಗಳಿಗೆ ತಡವಾಗಿ ಬರುವುದನ್ನೇ ರೂಢಿಸಿಕೊಂಡಿರುವ ವಿದ್ಯಾರ್ಥಿ, ಪ್ರಾಂಶುಪಾಲರು ವಿಧಿಸಬಹುದಾದ ಶಿಸ್ತಿನ ಕ್ರಮಕ್ಕೆ ಒಳಗಾಗಲೇಬೇಕಾಗಬಹುದು ಹಾಗೂ ಪರೀಕ್ಷೆಗಳಿಗೆ ಹಾಜರಾಗುವುದನ್ನು ನಿರ್ಬಂಧಿಸಲಾಗುವುದು.

(ಆ) ಪ್ರಾಂಶುಪಾಲರಿಂದ ನಿಗದಿತವಾದ ರಜೆಗಳ ಹೊರತಾಗಿ, ಯಾವುದೇ 'ಅಭ್ಯಾಸದ ರಜೆ' ಗೆ ಪರೀಕ್ಷೆ ಸಂದರ್ಭದಲ್ಲಿ ಅವಕಾಶವಿಲ್ಲ. ಆಗಿನ ಗೈರು ಹಾಜರಿಯನ್ನು ಶಿಸ್ತಿನ ಉಲ್ಲಂಘನೆಯೆಂದೇ ಪರಿಗಣಿಸಿ, ತಕ್ಕ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

(ಇ) ಅಧ್ಯಾಪಕರು ನಿಗದಿಪಡಿಸಿದ ಹೆಚ್ಚುವರಿ ತರಗತಿಗಳಿಗೆ ಹಾಜರಿ ಖಡ್ಡಾಯವಾಗಿರುವುದು.

- ತರಗತಿಯಲ್ಲಿ ಭಾಗಶಃ ರಜೆ ಬಯಸುವ ವಿದ್ಯಾರ್ಥಿಯು ಉಪನ್ಯಾಸ ಆರಂಭವಾಗುವ ಮೊದಲೇ ಸಂಬಂಧಪಟ್ಟ ಅಧ್ಯಾಪಕರನ್ನು ವೈಯಕ್ತಿಕವಾಗಿ ಕಂಡು ಮನವಿ ಮಾಡಿಕೊಳ್ಳಬೇಕು.
- ರಜೆಗಾಗಿ ಮನವಿಗಳನ್ನು ಸಾಕಷ್ಟು ಮೊದಲೇ ತರಗತಿಯ ಶೈಕ್ಷಣಿಕ ಸಲಹೆಗಾರರಿಗೂ, ರಜೆಯು ಮೂರು ದಿವಸಗಳಿಗೆ ಮೀರಿದಲ್ಲಿ ಪ್ರಾಂಶುಪಾಲರಿಗೂ ಸಲ್ಲಿಸಬೇಕು. ಅಸೌಖ್ಯದ ನಿಮಿತ್ತ ಮೂರು ದಿವಸಗಳಿಗೂ ಹೆಚ್ಚಿನ ರಜೆ ಬೇಕಾಗಿದ್ದಲ್ಲಿ ನಿಗದಿತ ನಮೂನೆಯಲ್ಲಿ ರಜೆ ಅರ್ಜಿಯನ್ನು ಪ್ರಾಂಶುಪಾಲರಿಗೆ ಸಲ್ಲಿಸಬೇಕು ಮತ್ತು ವೈದ್ಯಕೀಯ ಪ್ರಮಾಣ ಪತ್ರ ಹಾಜರಿಪಡಿಸಬೇಕು. ವಿದ್ಯಾರ್ಥಿ ವಸತಿಗೃಹದ ವಿದ್ಯಾರ್ಥಿಗಳು ರಜೆ ಅರ್ಜಿಗಳಲ್ಲಿ "ನಿಲಯ ಪಾಲಕರ" ಸಮ್ಮತಿಯ ಬಗ್ಗೆ ಸಹಿ ಪಡೆದಿರಬೇಕು.
- ರಜೆ ಅರ್ಜಿಯನ್ನು ಕಾಲೇಜು ಕ್ಯಾಲೆಂಡರಿನ ನಿಗದಿಪಡಿಸಿರುವ ಪುಟಗಳಲ್ಲಿ ಬರೆದು ಅನುಮತಿ ಪಡೆಯಬೇಕು.
